ಒಎಸ್ ಸಂ.ಃ175/2013
ಪಿಡಬ್ಲ್ಯೂ ಃ 3 (ಸೀತಮ್ಮ)
ದಿನಾಂಕ 06-09-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ 7 ಮತ್ತು 9 ರಿಂದ 11 ಮತ್ತು 19 ರವರ ಪರ ಶ್ರೀ ಕೆಆರ್‌ಆರ್ ವಕೀಲರಿಂದ

ಸಾಕ್ಷಿಯು ತನಗೆ ಕನ್ನಡ ಭಾಷೆ ಬರುವುದಿಲ್ಲವೆಂದು ತೆಲಗು ಭಾಷೆ ಸಂಪೂರ್ಣವಾಗಿ ಬರುತ್ತದೆ ಎಂದು ಹೇಳಿದ್ದರಿಂದ ತೆಲಗು ಭಾಷೆ ತಿಳಿದಿರುವ ಶ್ರೀಮತಿ ಆರ್.ವಿ ವಕೀಲರನ್ನು ಭಾಷಾ ತರ್ಜುಮೆದಾರರನ್ನಾಗಿ ನೇಮಕ ಮಾಡಲಾಯಿತು.

ಭಾಷಾ ತರ್ಜುಮೆದಾರರಿಗೂ ಸಹ ಪ್ರಮಾಣ ವಚನ ಭೋಧಿಸಲಾಯಿತು.

ನಿಮಗೆ ಮದುವೆಯಾಗಿ ಎಷ್ಟು ವರ್ಷಗಳಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ 10 ವರ್ಷ ಇರುವಾಗಲೇ ಆಗಿರುತ್ತದೆ ಎಂದು ಹೇಳುತ್ತಾರೆ. ನನಗೆ ಮದುವೆಯಾಗಿ ಸುಮಾರು 70-75 ವರ್ಷಗಳಾಗಿರಬಹುದು. ನನಗೆ ಮದುವೆಯಾಗುವ ಕಾಲಕ್ಕೆ ಮುನಿಯಪ್ಪ ಜೀವಂತ ಇರಲಿಲ್ಲ ಅವರ ಹೆಂಡತಿಯರು ಇದ್ದರು. ಮುನಿಯಪ್ಪನ ಮಕ್ಕಳಾದ ದೊಡ್ಡವೆಂಕಟಪ್ಪ ಮತ್ತು ಚಿಕ್ಕವೆಂಕಟಪ್ಪ ತೀರಿಕೊಂಡಿರುತ್ತಾರೆ. ದೊಡ್ಡವೆಂಕಟಪ್ಪನ ಹೆಂಡತಿ ರಾಮಕ್ಕ ಮದುವೆ ಕಾಲಕ್ಕೆ ಬದುಕಿದ್ದರು. ಆ ಸಮಯದಲ್ಲಿ ತುಂಬಾ ವೃಧ್ಧಾಪ್ಯರಾಗಿದ್ದರು. ಚಿಕ್ಕವೆಂಕಟಪ್ಪನ ಮಗ ಮುನಿವೆಂಕಟಪ್ಪ ನನ್ನ ಮದುವೆ ಕಾಲಕ್ಕೆ ಜೀವಂತ ಇದ್ದರು. ಮುನಿವೆಂಕಟಪ್ಪನ ಹೆಂಡತಿ ಚಿಕ್ಕತಿಮ್ಮಕ್ಕ ಜೀವಂತ ಇದ್ದರು. ಚಿಕ್ಕತಿಮ್ಮಕ್ಕನಿಗೆ ಮಕ್ಕಳು ಇಲ್ಲ ಎಂದರೆ ಸರಿ. ಬೇಡರ ಪಾಪಣ್ಣ ಮತ್ತು ಚಂಗಲರಾಯಪ್ಪ ರಾಮಕ್ಕನ ಮಕ್ಕಳು ಬದುಕಿದ್ದರು. ಬೇಡರ ಪಾಪಣ್ಣನನ್ನು ಮುನಿಯಪ್ಪ ಎಂದು ಕೂಡ ಕರೆಯುತ್ತಿದ್ದರು ಎಂದರೆ ಸರಿ. ಮದುವೆ ಕಾಲಕ್ಕೆ ಪೆದ್ದಪಾಪಕ್ಕ ಬದುಕಿದ್ದರು.

ಪೆದ್ದಪಾಪಕ್ಕನ ಮಕ್ಕಳಾದ ಪೆದ್ದಪಾಪಯ್ಯ, ಮುನಿವೆಂಕಟಪ್ಪ ಅಲಿಯಾಸ್ ಕಿಚ್ಚಪ್ಪ ಮತ್ತು ವೆಂಕಟಪ್ಪ ರವರು ನನ್ನ ಮದುವೆಯಾದ ನಂತರ ತೀರಿಕೊಂಡಿರುತ್ತಾರೆ. ಪೆದ್ದಪಾಪಯ್ಯನಿಗೆ ಇಬ್ಬರು ಹೆಂಡತಿಯರು ಅವರೆಂದರೆ ಚಿನ್ನಮ್ಮ ಅಲಿಯಾಸ್ ನರಸಮ್ಮ ಮತ್ತು ಈರಮ್ಮ ಎಂದರೆ ಸರಿ. ಈರಮ್ಮ ನನ್ನ ಮದುವೆಯಾದ 5-6 ವರ್ಷಗಳ ನಂತರ ತೀರಿಕೊಂಡಿರುತ್ತಾರೆ. ನರಸಮ್ಮ ಅಲಿಯಾಸ್ ಚಿನ್ನಮ್ಮ ಇವರಿಗೆ ನಾರಾಯಣಮ್ಮ ಮತ್ತು ನಾರಾಯಣಪ್ಪ ಎಂಬ ಮಕ್ಕಳು ಎಂದರೆ ಸರಿ. 3ನೇ ಪ್ರತಿವಾದಿ ನಾನಮ್ಮ ತೀರಿಕೊಂಡಿರುತ್ತಾರೆ. ನಾನಮ್ಮ ಇವರ ಗಂಡನ ಹೆಸರು

ಚಿನ್ನನಾಗಪ್ಪ.  ಅವರಿಗೆ ಮೂರು ಜನ ಹೆಣ್ಣು ಮಕ್ಕಳು ಒಬ್ಬ ಗಂಡು ಮಗ.  ಪದ್ಮಮ್ಮ ಮತ್ತು ಇನ್ನಿಬ್ಬರು 3ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ.

ವೆಂಕಟಪ್ಪ ತೀರಿಕೊಂಡು 5 ವರ್ಷಗಳಾಗಿರುತ್ತದೆ. ಅವರ ಹೆಂಡತಿ ಮಕ್ಕಳು ಜೀವಂತ ಇದ್ದಾರೆ. ಚಂಗಲರಾಯಪ್ಪ ನನ್ನ ಮಾವ ಅಕ್ಕಿಯಮ್ಮ ನಮ್ಮ ಅತ್ತೆ. ಮುನಿಯಪ್ಪ ಮತ್ತು ಚಿಕ್ಕವೆಂಕಟಪ್ಪ ಇವರು ಚಂಗಲರಾಯಪ್ಪನ ಮಕ್ಕಳು. ಚಿಕ್ಕವೆಂಕಟಪ್ಪನ ಹೆಂಡತಿ ನಾನು. ಸೋಮಶೇಖರ್ ತೀರಿಕೊಂಡಿರುತ್ತಾರೆ. ಸೋಮಶೇಖರ್ ನನ್ನ ಮಗ ಅವನ ಹೆಂಡತಿಯ ಹೆಸರು ಶಕುಂತಲ. ಅವರಿಗೆ ಮೂರು ಜನ ಹೆಣ್ಣು ಮಕ್ಕಳು ಅವರೆಂದರೆ ರೆಡ್ಡಮ್ಮ, ರೇಣುಕಾ ಮತ್ತು ರೇವತಿ. ಕವಿತಾ ನನ್ನ ದೊಡ್ಡ ಮಗ ನಾರಾಯಣಸ್ವಾಮಿಯ ಮಗಳು. ನನ್ನ ದೊಡ್ಡ ಮಗ ನಾರಾಯಣಸ್ವಾಮಿಗೆ ಕವಿತಾ, ಸ್ವಪ್ನ, ಶಶಿಕಲಾ, ಮುರಳಿ ಎಂಬ ಮಕ್ಕಳು.  ಚಂಗಲರಾಯಪ್ಪನ ಮಗ ಮುನಿಯಪ್ಪ ನನಗೆ ಭಾವನಾಗಬೇಕು ಅವರ ಹೆಂಡತಿ ಹೆಸರು ರಾಮಕ್ಕ.  ಅವರಿಗೆ ಸೀನಪ್ಪ, ಸುಬ್ರಮಣಿ ಮತ್ತು ಚಂಗಲರಾಯಪ್ಪ ಎನ್ನುವ ಮಕ್ಕಳು ಎಂದರೆ ಸರಿ. ರಾಮಕ್ಕನ ಮಗ ಚಂಗಲರಾಯಪ್ಪ ತೀರಿಕೊಂಡಿರುತ್ತಾರೆ.

ನನ್ನ ಮಾವ ಚಂಗಲರಾಯಪ್ಪನವರ ತಂದೆ ದೊಡ್ಡವೆಂಕಟಪ್ಪ ಮತ್ತು ಸಹೋದರ ಚಿಕ್ಕವೆಂಕಟಪ್ಪರವರು ದಿನಾಂಕ 23.11.1945 ರಲ್ಲಿ ಪಂಚಾಯಿತಿ ಮುಖಾಂತರ ಭಾಗ ಮಾಡಿಕೊಂಡಿರುತ್ತಾರೆ ಎಂದರೆ  ಸರಿಯಲ್ಲ. ಸಾಕ್ಷಿ ಮುಂದುವರೆದು ಭಾಗಗಳು ಆಗಿಲ್ಲ ಎಂದು ಹೇಳುತ್ತಾರೆ. 1945ರಲ್ಲೇ ದೊಡ್ಡವೆಂಕಟಪ್ಪ ಮತ್ತು ಚಿಕ್ಕವೆಂಕಟಪ್ಪ ಪಂಚಾಯಿತಿ ಮುಖಾಂತರ ಪಾಲು ಮಾಡಿಕೊಂಡು ಆಸ್ತಿಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಹೌದು ನಮ್ಮ ಜಮೀನು ನಮ್ಮ ಸ್ವಾಧೀನದಲ್ಲಿದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಭಾಗಗಳು ಆಗಿಲ್ಲ ಎಂದು ಹೇಳುತ್ತಾರೆ. ನನ್ನ ಗಂಡ ಈ ದಾವಾಯ ಐಟಂ ನಂ.8 ಸರ್ವೆ ನಂ.360/1 4 ಎಕರೆ 11 ಗುಂಟೆ ಆಸ್ತಿಯನ್ನು ದಿನಾಂಕ 03.07.1969 ರಂದು ಚಿನ್ನಪ್ಪಯ್ಯ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದ ನಂತರ ಚಿನ್ನಪ್ಪಯ್ಯ ಇವರು ಆ ಆಸ್ತಿಯ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ.

ಬೇಡರ ಪಾಪಣ್ಣನ ಮಗ ವೆಂಕಟಪ್ಪ ಇವರು ಚಿನ್ನಪ್ಪಯ್ಯ ಇವರಿಂದ ದಿನಾಂಕ 04.01.1971 ರಲ್ಲಿ ಆ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.  ಮಾರಾಟ ಮಾಡುವ ಮೊದಲೇ ಪಾಪಣ್ಣ ಇವರು ಆ ಆಸ್ತಿಯನ್ನು ಎಂ.ಕೆ.ಕಂಡಪ್ಪ ಇವರಿಗೆ ಭೋಗ್ಯ ಇಟ್ಟಿದ್ದರು ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಸ್ವಾಧೀನದಲ್ಲಿದ್ದೇವೆ ಎಂದು ಹೇಳುತ್ತಾರೆ. 1959 ರಲ್ಲಿ ಭೋಗ್ಯ ಇಟ್ಟಿದ್ದು 1960 ರಲ್ಲಿ ಭೋಗ್ಯ ಬಿಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಬಿಡಿಸಿಕೊಂಡಿದ್ದಾರೆ ನಮಗೇನು ಗೊತ್ತು ಎಂದು ಹೇಳುತ್ತಾರೆ. ನನ್ನ ಗಂಡ ದಿನಾಂಕ 12.12.1967 ರಂದು ಪಾಪಣ್ಣನ ಮಗ ವೆಂಕಟಪ್ಪ ಇವರಿಗೆ ಸರ್ವೆ ನಂ.41 ರಲ್ಲಿ 2 ಎಕರೆ 15 ಗುಂಟೆ ಆಸ್ತಿಯನ್ನು ಮಾರಾಟ ಮಾಡಿ ಕ್ರಯಪತ್ರ ಬರೆದುಕೊಟ್ಟು ಸ್ವಾಧೀನಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಾವ ಮತ್ತು ಭಾವ ಸರ್ವೆ ನಂ.105/2 2 ಎಕರೆ 17 ಗುಂಟೆ ಆಸ್ತಿಯನ್ನು ಪೆದ್ದಪ್ಪಯ್ಯ ಇವರಿಗೆ ಮಾರಾಟ ಮಾಡಿ ಕ್ರಯಪತ್ರ ಬರೆದು ಸ್ವಾಧೀನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಐಟಂ ನಂ.4 ಸರ್ವೆ ನಂ.362/1 ನ್ನು ನನ್ನ ಗಂಡ ದಿನಾಂಕ 04.04.1967 ರಂದು ಪೆದ್ದಪ್ಪಯ್ಯ ಇವರಿಗೆ ಮಾರಾಟ ಮಾಡಿ ಕ್ರಯಪತ್ರ ಬರೆದು ಸ್ವಾಧೀನ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕಳ್ಳಪತ್ರ ಸೃಷ್ಟಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಿನಾಂಕ 21.08.1966 ರಂದು ಸರ್ವೆ ನಂ.24/1 ರಲ್ಲಿ 19 ಗುಂಟೆ ಆಸ್ತಿಯನ್ನು ನನ್ನ ಗಂಡ ಪೆದ್ದಪ್ಪಯ್ಯ ಇವರಿಗೆ ಮಾರಾಟ ಮಾಡಿ ಕ್ರಯಪತ್ರ ಬರೆದು ಸ್ವಾಧೀನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ.7 ಸರ್ವೆ ನಂ.361/1 3 ಎಕರೆ 16 ಗುಂಟೆ ಆಸ್ತಿಯು ವಾದಿಯರಿಗಾಗಲೀ ಪ್ರತಿವಾದಿಯರಿಗಾಗಲೀ ಸಂಬಂಧಪಟ್ಟಿರುವುದಿಲ್ಲ ಅದು ಪಟೇಲ್ ತಿಪ್ಪಣ್ಣ ಇವರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಐಟಂ ನಂ.11 ಸರ್ವೆ ನಂ.24/2 17 ಗುಂಟೆ ಆಸ್ತಿಯು ವಾದಿಯರಿಗಾಗಲೀ ಪ್ರತಿವಾದಿಯರಿಗಾಗಲೀ ಸಂಬಂಧಪಟ್ಟಿರುವುದಿಲ್ಲ ಅದು ಸೈಯದ್ ಅಪ್ಸರ್ ಇವರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ.

ಐಟಂ ನಂ.1 ರಿಂದ 11 ರಲ್ಲಿ ನನಗಾಗಲೀ ಪ್ರತಿವಾದಿ 17 ಮತ್ತು 18 ರವರಿಗಾಗಲೀ ಯಾವುದೇ ಹಕ್ಕು, ಹಿತಾಸಕ್ತಿ  ಮತ್ತು ಭಾಗಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪ್ರತಿವಾದಿ 1 ರಿಂದ 16 ಮತ್ತು 19 ರಿಂದ 24 ರವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ನನ್ನ ಮಾವ ಚಂಗಲರಾಯಪ್ಪನ ಪಾಲಿಗೆ ಬಂದಂತಹ ಆಸ್ತಿಯನ್ನು ನನ್ನ ಗಂಡ ಮತ್ತು ಭಾವ 7ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.  ಮುನಿಯಪ್ಪನ ಮಗ ಚಿಕ್ಕವೆಂಕಟಪ್ಪ ತೀರಿಕೊಂಡ ನಂತರ ಆಸ್ತಿಯು ಮುನಿವೆಂಕಟಪ್ಪನಿಗೆ ಬಂದಿದ್ದು ಅವರು ತೀರಿಕೊಂಡ ನಂತರ ಚಿಕ್ಕತಿಮ್ಮಕ್ಕನಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.  ಮುನಿವೆಂಕಟಪ್ಪ ಮತ್ತು ಚಿಕ್ಕತಿಮ್ಮಕ್ಕನಿಗೆ ಮಕ್ಕಳು ಇಲ್ಲದೇ ಇದ್ದುದ್ದರಿಂದ ಅವರನ್ನು 1ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು

ಎಂದರೆ ಸರಿಯಲ್ಲ. ಮುನಿವೆಂಕಟಪ್ಪ ಮತ್ತು ಚಿಕ್ಕತಿಮ್ಮಕ್ಕನನ್ನು 1ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರಿಂದ ದಿನಾಂಕ 02.12.1967 ರಂದು ಚಿಕ್ಕತಿಮ್ಮಕ್ಕ ಇವರು ಅರ್ಧ ಭಾಗವನ್ನು 1ನೇ ಪ್ರತಿವಾದಿಗೆ ನೊಂದಾಯಿತ ವಿಲ್‌ನಾಮೆ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಆ ವಿಲ್‌ನಾಮೆಯಲ್ಲಿ ಚಿಕ್ಕತಿಮ್ಮಕ್ಕ ಇವರು ದೊಡ್ಡವೆಂಕಟಪ್ಪನ ಮಕ್ಕಳಾದ ಚಂಗಲರಾಯಪ್ಪ ಮತ್ತು ಪಾಪಣ್ಣ ಇವರಿಗೆ ಎಷ್ಟೆಷ್ಟು ಪಾಲು ಎಂದು ಬರೆದಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ವಿಲ್‌ನಾಮೆಯಲ್ಲಿ ಐಟಂ ನಂ.3 ಮತ್ತು 8ರಲ್ಲಿ ಅರ್ಧ ಹಿಸ್ಸೆ ಹಾಗೂ ಒಂದು ಮನೆ ವಠಾರವನ್ನು 1ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪಾರೀಖತ್ತು ಆದ ನಂತರ ಸೀನಪ್ಪ ಮತ್ತು ಸುಬ್ರಮಣಿ ಇವರು ದಿನಾಂಕ 22.04.1947 ರಲ್ಲಿ ಹೊಸಪಾಳ್ಯದಲ್ಲಿ 90 )( 8ವರೆ ಗಜ ವಿಸ್ತೀರ್ಣದ ಒಂದು ಮನೆಯನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಆ ಆಸ್ತಿಯು ಅವರ ಸ್ವಾಧೀನದಲ್ಲಿದೆ ಎಂದರೆ ಅವರು ಖರೀದಿಸಿರುವುದಿಲ್ಲ ಅವರು ಬಾಡಿಗೆ ಮನೆಯಲ್ಲಿ ಇದ್ದಾರೆ ಎಂದು ಹೇಳುತ್ತಾರೆ. ಆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಮಾವ ಚಂಗಲರಾಯಪ್ಪನ ಪಾಲಿಗೆ ಬಂದ ಆಸ್ತಿಯನ್ನು ನನ್ನ ಗಂಡ ಮತ್ತು ಭಾವ ಮಾರಾಟ ಮಾಡಿದ್ದರಿಂದ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಯಾವುದೇ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದು ಹೇಳುತ್ತಾರೆ.

ಐಟಂ ನಂ.2 ಸರ್ವೆ ನಂ.106/3 2 ಎಕರೆ 10 ಗುಂಟೆ ಪಾಪಣ್ಣನ ಹಿಸ್ಸೆಗೆ ಬಂದಿದ್ದು ಅವರು ಆ ಆಸ್ತಿಯನ್ನು ಹೆಣ್ಣು ಮಕ್ಕಳಾದ ನಾಗಮ್ಮ ಮತ್ತು ತಿಪ್ಪಮ್ಮನಿಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅರಿಶಿನ ಕುಂಕುಮ ಸಲುವಾಗಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಐಟಂ ನಂ.4 ಸರ್ವೆ ನಂ.362 1 ಎಕರೆ 19 ಗುಂಟೆ ನನ್ನ ಗಂಡ ಪೆದ್ದಪ್ಪಯ್ಯ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ.5 ಸರ್ವೆ ನಂ.362/2 1 ಎಕರೆ 10 ಗುಂಟೆ ಜಮೀನು ನಮಗೆ ಸೇರಿರುವುದಿಲ್ಲ ಆ ಆಸ್ತಿಯು ಮುನಿಯಪ್ಪ ಬಿನ್ ಚಿಕ್ಕಮುನಿಸ್ವಾಮಪ್ಪನಿಗೆ ಸೇರಿರುವುದು ಎಂದರೆ ಸರಿಯಲ್ಲ. ನಮ್ಮ ಮಾವನಿಗೆ ಹಿಸ್ಸೆಗೆ ಬಂದ ಆಸ್ತಿಗಳನ್ನು ನನ್ನ ಗಂಡ ಮತ್ತು ಭಾವ ಮಾರಾಟ ಮಾಡಿದ್ದು ಈಗ ಬೇಡರ ಪಾಪಣ್ಣ ಮತ್ತು ಅವರ ಮೊಮ್ಮಕ್ಕಳು ಸ್ವಾಧೀನದಲ್ಲಿರುವ ಆಸ್ತಿಗಳಲ್ಲಿ ನಮಗೆ ಭಾಗ ಬೇಕು ಎಂದು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1945 ರಿಂದಲೂ

ನಾವು ಯಾವತ್ತಿಗೂ ಒಟ್ಟಾಗಿ ವಾಸವಾಗಿಲ್ಲ ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ನಮಗಾಗಲೀ ಪ್ರತಿವಾದಿ 17 ಮತ್ತು 18 ರವರಿಗಾಗಲೀ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲ ಅವು ಪ್ರತಿವಾದಿ 1 ರಿಂದ 16 ಮತ್ತು 19 ರಿಂದ 24 ರವರಿಗೆ ಸಂಬಂಧಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ನಾವು ಕೇವಲ ಮೂರು ವರ್ಷಗಳಿಂದ ಪ್ರತ್ಯೇಕವಾಗಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸುಮಾರು 50 ವರ್ಷಗಳಿಂದಲೂ ಪ್ರತ್ಯೇಕವಾಗಿದ್ದೇವೆ ಎಂದರೆ ಸರಿಯಲ್ಲ. ಮುನಿಯಪ್ಪನ ಮಕ್ಕಳು ಸೀನಪ್ಪ ಮತ್ತು ಸುಬ್ರಮಣಿ ಹೊಸಪಾಳ್ಯದಲ್ಲಿ ವಾಸವಾಗಿದ್ದಾರೆ. ನಾನು ಮುಳಬಾಗಿಲಿನ ವಾಲ್ಮೀಕಿ ನಗರದಲ್ಲಿ ವಾಸವಾಗಿದ್ದೇನೆ. ನಾವು ಮುನಿವೆಂಕಟಪ್ಪನ ಬಳಿ ಭಾಗ ಕೇಳಿದಾಗ ಅವರು ಭಾಗ ಕೊಡುವುದಿಲ್ಲವೆಂದು ಹೇಳಿದ್ದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸಾಕ್ಷಿಯು ಪಂಚಾಯಿತಿನೂ ಗೊತ್ತಿಲ್ಲ ರಾಮಾಯಣನೂ ಗೊತ್ತಿಲ್ಲ ಯಾವುದೇ ಭಾಗ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಮುನಿವೆಂಕಟಪ್ಪನ ಆಸ್ತಿಗಳನ್ನು ಕಬಳಿಸುವ ಸಲುವಾಗಿ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ 25 ಮತ್ತು 26 ರವರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 28 ರಿಂದ 30 ರವರ ಪರ ಶ್ರೀ ಟಿಆರ್‌ವಿ ವಕೀಲರಿಂದ

ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.

ಸಾಕ್ಷಿದಾರರ ಸಹಿ

ಭಾಷಾ ತರ್ಜುಮೆದಾರರ ಸಹಿ